## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮ/ಯೋಜನೆಗಳಿಗೆ ನಿಗದಿಪಡಿಸಿರುವ ಆದಾಯ ಮಿತಿಗಳನ್ನು ಪರಿಷ್ಕರಿಸುವ ಬಗ್ಗೆ

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ ಸಕಇ 5 ಬಿಸಿಎ 1995 ದಿನಾಂಕ 1-9-1995
2) ಸರ್ಕಾರದ ಆದೇಶ ಸಂಖ್ಯೆ ಸಕಇ 171 ಬಿಸಿಎ 1996 ದಿನಾಂಕ 11-7-1997
3) ಸರ್ಕಾರದ ಆದೇಶ ಸಂಖ್ಯೆ ಸಕಇ 191 ಬಿಎಂಎಸ್ 2001 ದಿನಾಂಕ 11-6-2001
4) ಸರ್ಕಾರದ ಆದೇಶ ಸಂಖ್ಯೆ ಸಕಇ 190 ಬಿಎಂಎಸ್ 2001 ದಿನಾಂಕ 12-6-2001
5) ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000 ದಿನಾಂಕ 30-3-2002
6) ಸರ್ಕಾರದ ಆದೇಶ ಸಂಖ್ಯೆ ಸಕಇ 359 ಪಕವಿ 2009 ದಿನಾಂಕ 29-1-2010
7) ಸರ್ಕಾರದ ಆದೇಶ ಸಂಖ್ಯೆ ಸಕಇ 85 ಎಸ್ಎಲ್‌ಪಿ 2009 ದಿನಾಂಕ 16-9-2010
8) ಸರ್ಕಾರದ ಆದೇಶ ಸಂಖ್ಯೆ ಸಕಇ 132 ಮೊದೇಶಾ 2010 ದಿನಾಂಕ 1-12-2010
9) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ 11014/21/2006 ಬಿಸಿ1 ದಿನಾಂಕ 11-8-2011
10) ಸರ್ಕಾರದ ಆದೇಶ ಸಂಖ್ಯೆ ಸಕಇ 96 ಬಿಎಂಎಸ್ 2011 ದಿನಾಂಕ 22-9-2011
11) ಸರ್ಕಾರದ ಆದೇಶ ಸಂಖ್ಯೆ ಸಕಇ 160 ಬಿಎಂಎಸ್ 2012 ದಿನಾಂಕ 29-6-2012
12) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ಇವರ ಏಕ ಕಡತ ಸಂಖ್ಯೆ ಹಿಂವಕ:ವನಿಶಾ:ಸಿಆರ್-51:2013-14 ದಿನಾಂಕ 20-7-2013

Director, Backward Classes Welfare Dept. B'lore 11-9-13

---

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ 1 ರಿಂದ 11ರವರೆಗಿನ ಆದೇಶಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮ/ ಯೋಜನೆಗಳಿಗೆ ಸಂಬಂಧಿಸಿದಂತೆ ಆಗಿಂದಾಗ್ಗೆ ವಾರ್ಷಿಕ ಆದಾಯ ಮಿತಿಗಳನ್ನು ನಿಗದಿಪಡಿಸಿಕೊಂಡು ಬರಲಾಗುತ್ತಿದೆ. ಈ ರೀತಿ ನಿಗದಿಪಡಿಸಿರುವ ಬೇರೆ ಬೇರೆ ಆದಾಯ ಮಿತಿಗಳನ್ನು ಕ್ರೋಢೀಕರಿಸಿ, ವಿವಿಧ ಗುಂಪಿನ ಕಾರ್ಯಕ್ರಮ/ಯೋಜನೆವಾರು ಏಕರೂಪವಾದ ಆದಾಯ ಮಿತಿಗಳನ್ನು ನಿಗದಿಪಡಿಸುವ ಅಗತ್ಯತೆ ಇರುತ್ತದೆಂದೂ, ಈ ಹಿನ್ನಲೆಯಲ್ಲಿ ಕೇವಲ ಶುಲ್ಕ ವಿನಾಯಿತಿ/ ವಿದ್ಯಾರ್ಥಿವೇತನ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಮಾತ್ರ ವಾರ್ಷಿಕ ಆದಾಯ ಮಿತಿ ದರಗಳನ್ನು ಪರಿಷ್ಕರಿಸುವುದಕ್ಕೆ ಬದಲಾಗಿ, ಈ ಇಲಾಖೆಯ ಎಲ್ಲಾ ಕಾರ್ಯಕ್ರಮಗಳು/ ಯೋಜನೆಗಳಿಗೆ ಸಂಬಂಧಿಸಿದಂತೆ ಬಹಳ ವರ್ಷಗಳ ಹಿಂದೆ ನಿಗದಿಪಡಿಸಲಾಗಿರುವ ವಾರ್ಷಿಕ ಆದಾಯ ಮಿತಿಯ ದರಗಳನ್ನು, ಸಮಗ್ರವಾಗಿ ಪರಿಷ್ಕರಿಸಲು ಕೋರಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು, ಮೇಲೆ ಕ್ರಮ ಸಂಖ್ಯೆ 12ರಲ್ಲಿ ಓದಲಾದ ಏಕಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯ ಮೇರೆಗೆ ಹಾಗೂ ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಹಣದುಬ್ಬರವನ್ನು ಗಮನದಲ್ಲಿರಿಸಿಕೊಂಡು ಹಿಂದುಳಿದ ವರ್ಗಗಳಲ್ಲಿನ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಹಿತದೃಷ್ಟಿಯಿಂದ ಇಲಾಖೆಯ ವಿವಿಧ ಕಾಯಕ್ರಮ/ಯೋಜನೆಗಳಲ್ಲಿನ ಸವಲತ್ತುಗಳನ್ನು ಪಡೆದುಕೊಳ್ಳುವ ಸಲುವಾಗಿ ಹಾಲಿ ನಿಗದಿಪಡಿಸಿರುವ ಆದಾಯಮಿತಿಯನ್ನು ಪರಿಷ್ಕರಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

11/10/9/13

### ಸರ್ಕಾರದ ಆದೇಶ ಸಂಖ್ಯೆ ಹಿಂವಇ 397 ಬಿಎಂಎಸ್ 2013 ಬೆಂಗಳೂರು ದಿನಾಂಕ 05-09-2013

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆ/ಕಾರ್ಯಕ್ರಮಗಳಿಗೆ ಮೇಲೆ ಓದಲಾದ ಆದೇಶಗಳಲ್ಲಿ ನಿಗದಿಪಡಿಸಲಾಗಿದ್ದ ಆದಾಯ ಮಿತಿಗಳನ್ನು ಈ ಆದೇಶದ ಅನುಬಂಧದಲ್ಲಿರುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿದೆ.

ವಿವಿಧ ಕಾರ್ಯಕ್ರಮಗಳಡಿ ಅರ್ಹತೆಗಾಗಿ ನಿಗದಿಪಡಿಸಿರುವ ವಾರ್ಷಿಕ ಆದಾಯದ ಮಿತಿಯನ್ನು ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಹಾಗೂ ಆಯಾ ಕಾರ್ಯಕ್ರಮಕ್ಕೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಅನುದಾನದ ಮಿತಿಯಲ್ಲಿಯೇ ವೆಚ್ಚಗಳನ್ನು ಭರಿಸತಕ್ಕದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆಆಇ 596 ವೆಚ್ಚ-3/13 ದಿ:4-9-2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,

**ಇವರಿಗೆ :**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು- ಇವರಿಗೆ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಒದಗಿಸಲು ಕೋರಿದೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.(ಎ ಮತ್ತು ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು,
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
6. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
7. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
8. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು
9. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
10. ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು
11. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತಕಾರ್ಯದರ್ಶಿ
13. ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
14. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು
15. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 3&9)
16. ಶಾಖಾರಕ್ಷ ಕಡತ
17. ಕಛೇರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ ಹಿಂವಇ 397 ಬಿಎಂಎಸ್ 2013 ಬೆಂಗಳೂರು ದಿನಾಂಕ 05-09-2013ಕ್ಕೆ

## ಅನುಬಂಧ

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮ/ಯೋಜನೆಗಳಿಗೆ ನಿಗದಿಪಡಿಸಿರುವ ಆದಾಯ ಮಿತಿಗಳು

| ಕ್ರ. ಸಂ. | ಯೋಜನೆಗಳು | ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿ | |
|---|---|---|---|
| | | ಪ್ರವರ್ಗ-1 ಕ್ಕೆ | ಪ್ರವರ್ಗ-2ಎ, 2ಬಿ, 3ಎ, 3ಬಿ ಗಳಿಗೆ |
| 1 | 2 | 3 | 4 |
| 1) | ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ (ಕೇಂದ್ರ ಪುರಸ್ಕೃತ ಯೋಜನೆ | ರೂ. 44,500/- | ರೂ. 44,500/- |
| 2) | ಸರ್ಕಾರಿ ಹಾಗೂ ಖಾಸಗಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ | ರೂ. 1.00 ಲಕ್ಷ | ರೂ. 44,500/- |
| 3) | ಮೆಟ್ರಿಕ್-ಪೂರ್ವ ವೇತನ | ರೂ.1.00 ಲಕ್ಷ | ರೂ.44,500/- |
| 4) | ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ, ವಸತಿ ಶಾಲೆಗಳ ಪ್ರವೇಶಕ್ಕಾಗಿ | ರೂ.1.00 ಲಕ್ಷ | ರೂ.44,500/- |
| 5) | ಆಶ್ರಮ ಶಾಲೆಗಳಿಗೆ ಪ್ರವೇಶಕ್ಕಾಗಿ | ರೂ.1.00 ಲಕ್ಷ | ರೂ.44,500/- |
| 6) | **ಅನಾಥಾಲಯ ಪ್ರವೇಶಕ್ಕಾಗಿ**<br>ಎ)ಅನಾಥರು | ಆದಾಯ ಮಿತಿ ಇಲ್ಲ | ಆದಾಯ ಮಿತಿ ಇಲ್ಲ |
| | ಬಿ)ನಿರ್ಗತಿಕರು | ರೂ.1.00 ಲಕ್ಷ | ರೂ.44,500/- |
| 7) | ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ (ಕೇಂದ್ರ ಪುರಸ್ಕೃತ ಯೋಜನೆ) | ರೂ.1.00 ಲಕ್ಷ | ರೂ.1.00 ಲಕ್ಷ |
| 8) | ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ | ರೂ.2.50 ಲಕ್ಷ | ರೂ.1.00 ಲಕ್ಷ |
| 9) | ಸರ್ಕಾರಿ ಹಾಗೂ ಖಾಸಗಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ | ರೂ.2.50 ಲಕ್ಷ | ರೂ.1.00 ಲಕ್ಷ |
| 10) | ಶುಲ್ಕ ವಿನಾಯಿತಿ | ರೂ.2.50 ಲಕ್ಷ | ರೂ.1.00 ಲಕ್ಷ |
| 11) | ಊಟ ಮತ್ತು ವಸತಿ ಸಹಾಯ ಯೋಜನೆ | ರೂ.2.50 ಲಕ್ಷ | ರೂ.1.00 ಲಕ್ಷ |
| 12) | ನರ್ಸಿಂಗ್/ಪ್ಯಾರಾ ಮೆಡಿಕಲ್ ತರಬೇತಿ | ರೂ.2.50 ಲಕ್ಷ | ರೂ.1.00 ಲಕ್ಷ |
| 13) | ಕೌಶಲ್ಯ ತರಬೇತಿ/ಹೊಲಿಗೆ ತರಬೇತಿ | ರೂ.2.50 ಲಕ್ಷ | ರೂ.1.00 ಲಕ್ಷ |
| 14) | ಕಾನೂನು ತರಬೇತಿ | ರೂ.3.50 ಲಕ್ಷ | ರೂ.2.50 ಲಕ್ಷ |
| 15) | ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ (ಐಎಎಸ್/ಕೆಎಎಸ್ ಇತ್ಯಾದಿ) | ರೂ.4.50 ಲಕ್ಷ | ರೂ.3.50 ಲಕ್ಷ |
| 16) | ವಿದೇಶ ವ್ಯಾಸಂಗಕ್ಕಾಗಿ ಆರ್ಥಿಕ ನೆರವು | ರೂ.4.50 ಲಕ್ಷ | ರೂ.4.50 ಲಕ್ಷ |

...2

[signature]

## ಅಲೆಮಾರಿ ಜನಾಂಗದವರಿಗಾಗಿ ಕಾರ್ಯಕ್ರಮಗಳು

| ಕ್ರ.ಸಂ | ಯೋಜನೆಗಳು | ನಿಗದಿಪಡಿಸಿದ ವಾರ್ಷಿಕ ಆದಾಯ ಮಿತಿ |
|---|---|---|
| 1 | ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ | ರೂ.2.50 ಲಕ್ಷ |
| 2 | ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ | ರೂ.2.00 ಲಕ್ಷ |
| 3 | ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ | ರೂ.2.00 ಲಕ್ಷ |
| 4 | ವಸತಿ ಯೋಜನೆ | ರೂ.2.00 ಲಕ್ಷ |

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,